# ಶ್ರೀಮಾತೆಯವರೊಡನೆ ಮಾತುಕತೆ



ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು:

ದಿನಾಂಕ: ೧೫. ೬. ೧೯೧೨

(ಶ್ರೀಮಾತೆಯವರು ಸ್ತ್ರೀಭಕ್ತೆಯರ ಜೊತೆಗೆ ಮಾತನಾಡುತ್ತಿದ್ದಾರೆ. ಅವರ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಿದ್ದಾರೆ. – ಮುಂದೆ ಓದಿ)

ಸಂಜೆಯಾಗುತ್ತಿದ್ದಂತೆ, ಒಬ್ಬೊಬ್ಬರಾಗಿ ಶ್ರೀಮಾತೆಯವರಿಗೆ ನಮಸ್ಕರಿಸಿ ಹೊರಡುತ್ತಿದ್ದಾರೆ. ಯೋಗಿನ್ ಮಾ ಸಹ ನಮಸ್ಕರಿಸಿ ಸಂಧ್ಯಾರತಿಗೆ ತಯಾರಾದಳು. ಶ್ರೀಮಾತೆಯವರೂ ಸಹ ರಸ್ತೆಯ ಪಕ್ಕದಲ್ಲಿರುವ ವರಾಂಡಾದಲ್ಲಿ ಜಪಧ್ಯಾನ ಮಾಡುತ್ತಾ ಕುಳಿತರು. ಶ್ರೀಮಾತೆಯವರು ತಮ್ಮ ಉಪಾಸನೆಯನ್ನು ಮುಗಿಸಿದ ನಂತರ, ಉಳಿದಿದ್ದ ಸ್ತ್ರೀಭಕ್ತರು ಅವರಿಗೆ ನಮಸ್ಕರಿಸಿ, ತಮ್ಮ ಮನೆಗಳಿಗೆ ಹಿಂದಿರುಗಿದರು. ನಾನೊಬ್ಬಳೇ ಉಳಿದೆ. ಆಗ ಶ್ರೀಮಾತೆಗೆ ಹೇಳಿದೆ: "ಅಮ್ಮಾ, ಸ್ತ್ರೀಯರು ಮುಟ್ಟಾದಾಗಲೂ ಶ್ರೀರಾಮಕೃಷ್ಣರ ಪೂಜೆ ಮಾಡಬಹುದೇ?" ಶ್ರೀಮಾತೆಯವರು ಉತ್ತರಿಸಿದರು: " ಹೌದಮ್ಮಾ, ನಿಜವಾಗಿ ನಿನಗೆ ಶ್ರೀರಾಮಕೃಷ್ಣರಲ್ಲಿ ಪ್ರೀತಿಯಿದ್ದರೆ ಮಾಡಬಹುದು. ನಾನೂ ಸಹ ಈ ಮಾತನ್ನು ಶ್ರೀರಾಮಕೃಷ್ಣರಲ್ಲಿ ಕೇಳಿದ್ದೆ. ಅವರೆಂದರು: 'ಪೂಜೆ ಮಾಡದೆ ಇದ್ದರೆ ಮನಸ್ಸು ಕಷ್ಟಕ್ಕೆ ಒಳಗಾಗುವುದಾದರೆ ಮಾಡು. ಇಲ್ಲದಿದ್ದರೆ ಇಲ್ಲ' ಎಂದು. ಆದ್ದರಿಂದ ನೀನು ಪೂಜೆ ಮಾಡಬಹುದು. ಆದರೆ ಮನಸ್ಸಿನಲ್ಲಿ ಸ್ವಲ್ಪ ಸಂದೇಹ ಎದ್ದರೂ ಕೂಡ ನಿಲ್ಲಿಸಿಬಿಡು."

ಶ್ರೀಮಾತೆ ಈ ತರಹದ ಸಲಹೆಯನ್ನು ಎಲ್ಲರಿಗೂ ಕೊಡುತ್ತಿದ್ದರು ಎಂದೇನಿಲ್ಲ. ಸ್ವಲ್ಪ ದಿನಗಳ ನಂತರ ಮತ್ತೊಬ್ಬ ಭಕ್ತೆ ಇದೇ ಪ್ರಶ್ನೆ ಕೇಳಿದಾಗ ಶ್ರೀಮಾತೆಯವರು "ಆ ಅವಸ್ಥೆಯಲ್ಲಿ ದೇವತಾಕಾರ್ಯ ಮಾಡುವುದು ಒಳ್ಳೆಯದಲ್ಲ; ನೀನು ಪೂಜೆ ಮಾಡಬೇಡ" ಎಂದು ತಿಳಿಸಿದ್ದರು. ಬೇರೆ ಬೇರೆ ವ್ಯಕ್ತಿಗಳದ್ದು ಬೇರೆ ಬೇರೆ ಮನಸ್ಸಿನ ಸ್ಥಿತಿಗಳು. ಅದನ್ನು ತಿಳಿದು, ಶ್ರೀಮಾತೆಯವರು ಅದಕ್ಕೆ ತಕ್ಕಂತೆ ನಿರ್ದೇಶಿಸುತ್ತಿದ್ದರು. ಯಾರಿಗೆ ಯಾವ ಸಲಹೆ ಕೊಡುತ್ತಿದ್ದರು ಎನ್ನುವುದನ್ನು ತಿಳಿಯಲು ಅಸಾಧ್ಯ.

ರಾತ್ರಿಯಾಗುತ್ತ ಬಂದಿದೆ. ನನ್ನನ್ನು ಕರೆದೊಯ್ಯಲು ಇನ್ನೂ ಯಾರೂ ಬಂದಿಲ್ಲ. ಗೋಲಾಪ್ ಮಾ ಯಾರನ್ನೋ ಕುರಿತು ಜೋರಾಗಿ ಕೂಗಿ ಕೇಳಿದಾಗ, ಕೆಳಗಿನಿಂದ ಉತ್ತರ ಬಂತು " ಗೌರೀಮಾ ಜೊತೆಗೆ ಆಗಲೇ ಹೊರಟುಹೋಗಿದ್ದಾಳೆ" ಎಂದು. ಇದನ್ನು ಕೇಳಿ ಶ್ರೀಮಾತೆಯವರಿಗೆ ಹೇಳಿದೆ: "ಆದರೇನಂತೆ, ನಾನು ಈ ರಾತ್ರಿ ಇಲ್ಲಿಯೇ ಇರುತ್ತೇನೆ" ಎಂದು. ಶ್ರೀಮಾತೆಯವರು "ಅದಕ್ಕೇನೂ ಅಲ್ಲ. ಆದರೆ, ಇವತ್ತು ಆಷಾಢ ಪ್ರತಿಪತ್ (ಅಗಸ್ತ್ಯ ಯಾತ್ರೆಯ ದಿನ). ಇಂದು ಎಲ್ಲೂ ಹೊರಗೆ ತಂಗಬಾರದು (ಅದು ಬಂಗಾಳದಲ್ಲಿದ್ದ ನಂಬಿಕೆ)" ಎಂದರು. ಇಂತಹ ಒಳ್ಳೆಯ ಸ್ಥಳದಲ್ಲಿ ಅಗಸ್ತ್ಯ ಯಾತ್ರೆಯ ದಿನದಂದು ತಂಗುವುದು ಒಳ್ಳೆಯದೇ ಎಂದು ಮನಸ್ಸಿನಲ್ಲೇ ಅಂದು ಕೊಂಡೆ. ರಾತ್ರಿಯ ನೈವೇದ್ಯ ಆಯಿತು. ಪ್ರಸಾದ ಸೇವನೆಗಾಗಿ ಎಲ್ಲರೂ ಕುಳಿತೆವು. ಸಂಜೆ ಶ್ರೀಮಾತೆಯವರು ಪ್ರಸಾದವನ್ನು ಹೆಚ್ಚಾಗಿ ಕೊಟ್ಟಿದ್ದರಿಂದ ಈಗ ತಿನ್ನಲು ಹಸಿವಿರಲಿಲ್ಲ. ಗೋಲಾಪ್ ಮಾ ಅದಕ್ಕೆ "ಯಾಕಮ್ಮಾ, ನಮ್ಮ ಮನೆಗೆ ಬಂದು ಉಪವಾಸ ಇರುತ್ತೀಯಾ!" ಎಂದು ಆಕ್ಷೇಪಿಸಿದಳು. ಶ್ರೀಮಾತೆಯವರಂತೂ "ಅದು ಹೇಗೆ ತಾನೆ ಆಗುತ್ತೆ – ಸ್ವಲ್ಪ ತಿನ್ನಲೇ ಬೇಕು" ಎಂದು ಹೇಳುತ್ತಾ, ತಾವೇ ಒಂದು ತಟ್ಟೆಯಲ್ಲಿ ಸ್ವಲ್ಪ ಲೂಚಿ (ಸಣ್ಣ ಪೂರಿ), ಪಲ್ಯ, ಸ್ವಲ್ಪ ಸಿಹಿತಿಂಡಿ ತಂದುಕೊಟ್ಟರು.

ರಾತ್ರಿ ಸುಮಾರು ೧೧ ಗಂಟೆ ಆಗಿದೆ. ಗೌರೀಮಾಳ ಆಶ್ರಮದಲ್ಲಿ ನಾನು ಇಲ್ಲದ್ದನ್ನು ಕಂಡು ಶ್ರೀ ವಿನೋದ್ ಇಲ್ಲಿಗೆ ಬಂದಿದ್ದಾರೆ. ಕೆಳಗೆ ಸಾಧುಬ್ರಹ್ಮಚಾರಿಗಳು ನಿದ್ರಿಸುತ್ತಿದ್ದಾರೆ. ಶ್ರೀಮಾತೆಯವರಿಗೆ ನಮಸ್ಕರಿಸಿ ನಾನು ಹೊರಡಲು ಅನುವಾದೆ. ಶ್ರೀಮಾತೆಯವರು ಸ್ನೇಹದಿಂದ, " ಇರಲಿ, ಇನ್ನೊಮ್ಮೆ ಬಂದು ನಮ್ಮ ಜೊತೆ ರಾತ್ರಿ ಇರುವೆಯಂತೆ. ಹೋಗಿ ಬಾ" ಎಂದು ಹೇಳಿದರು. ನಿಧಾನವಾಗಿ ಮೆಟ್ಟಲಿಳಿಯಲು ಪ್ರಾರಂಭಿಸಿದೆ. ಶರತ್ ಮಹಾರಾಜರು (ಸ್ವಾಮಿ ಶಾರದಾನಂದ) ಹೇಳಿದರು: " ವಿನೋದ್, ಬಹಳ ರಾತ್ರಿಯಾಗಿದೆ. ನಿಧಾನವಾಗಿ ಇಳಿ." ಮನೆಗೆ ಬಂದಾಗ ರಾತ್ರಿ ಹನ್ನೆರಡು ಗಂಟೆ.

ಮತ್ತೊಂದು ದಿನ ಮಧ್ಯಾಹ್ನ ಶ್ರೀಮಾತೆಯವರು ಊಟವಾದ ನಂತರ ವಿಶ್ರಮಿಸುತ್ತಿದ್ದಾರೆ. ಶ್ರೀಮಾತೆಯವರ ಆದೇಶದಂತೆ, ನಾನು ಅವರ ಪಕ್ಕದಲ್ಲಿಯೇ ಮಲಗಿ ಗಾಳಿ ಬೀಸುತ್ತಿದ್ದೆ. ಶ್ರೀಮಾತೆ ತಮಗೆ ತಾವೇ ಮಾತನಾಡಿಕೊಳ್ಳುತ್ತಿದ್ದಾರೆ: "ವಿನೋದಮ್ಮ... ನೀವೆಲ್ಲ ಬಂದಿದ್ದೀರಿ. ಆದರೆ, ಅವರಿಲ್ಲವಲ್ಲಾ? (ಶ್ರೀರಾಮಕೃಷ್ಣರು)" ಆಗ ನಾನೆಂದೆ, "ಈ ಜನ್ಮದಲ್ಲಿ ಅವರ (ಶ್ರೀರಾಮಕೃಷ್ಣರ) ದರ್ಶನ ಪಡೆಯುತ್ತೇವೆಯೋ ಇಲ್ಲವೋ ಗೊತ್ತಿಲ್ಲ. ಆದರೆ ನಿಮ್ಮ ದರ್ಶನವನ್ನಂತೂ ಪಡೆದಿದ್ದೇನೆ. ಇದೇ ನನ್ನ ಸೌಭಾಗ್ಯ." ಲಜ್ಜಾಮಯಿಯಾದ ಶ್ರೀಮಾತೆಯವರು ತಮ್ಮ ಬಗ್ಗೆ ಏನೂ ಹೇಳಿಕೊಳ್ಳುತ್ತಿರಲಿಲ್ಲ. ಆದರೆ ಆಶ್ಚರ್ಯ! ಇವತ್ತು ನನ್ನ ಮಾತನ್ನು ಒಪ್ಪುತ್ತಾ ಹೀಗೆ ಹೇಳಿದರು, " ಹೌದು, ಅದೂ ಸರಿಯೇ." (ಮುಂದುವರಿಯುವುದು)

---

**ನನ್ನ ಕರುಣೆಯನ್ನು ಪಡೆಯದವನು ನಿಜಕ್ಕೂ ದುರದೃಷ್ಟವಂತ. ನಾನು ಕರುಣೆ ತೋರದ ಯಾವ ವ್ಯಕ್ತಿಯೂ, ಅಷ್ಟೇಕೆ, ಒಂದು ಕೀಟವೂ ಇಲ್ಲ. ನಾನು ದುಷ್ಟರಿಗೂ ತಾಯಿ, ಗುಣವಂತರಿಗೂ ತಾಯಿ. ಹೆದರಬೇಡ; ಕಷ್ಟದಲ್ಲಿದ್ದಾಗಲೆಲ್ಲ ನಿನ್ನಷ್ಟಕ್ಕೆ ಹೇಳಿಕೋ, "ನನಗೊಬ್ಬಳು ತಾಯಿ ಇದ್ದಾಳೆ" ಎಂದು.** —ಶ್ರೀಮಾತೆ ಶಾರದಾದೇವಿ